ವಿಶೇಷ ಲೇಖನ

# ರಾಷ್ಟ್ರೀಯ ಹೆಮ್ಮೆಯಲ್ಲಿ ಹಸ್ತಕ್ಷೇಪ

ಸ್ವಾಮಿ ಹರ್ಷಾನಂದ

ಇಂದಿನ ವಿದ್ಯಾಭ್ಯಾಸದಲ್ಲಿ ಭಾರತೀಯ ಸಂಸ್ಕೃತಿಯನ್ನು ಕಡೆಗಣಿಸಲಾಗುತ್ತಿದೆ; ಉದಾತ್ತ ಮೌಲ್ಯಗಳನ್ನು ಬದಿಗೊತ್ತಲಾಗುತ್ತಿದೆ. ಇದು ರಾಷ್ಟ್ರೀಯತೆಗೆ ಅಪಮಾನ ತರುವಂಥದ್ದಾಗಿದೆ. ಈ ಗಂಭೀರ ವಿಷಯದ ಬಗ್ಗೆ ಬೆಳಕು ಚೆಲ್ಲಿರುವ ಪರಮಪೂಜ್ಯ ಸ್ವಾಮೀಜಿಯವರು ಬೆಂಗಳೂರಿನ ರಾಮಕೃಷ್ಣ ಮಠದ ಅಧ್ಯಕ್ಷರು. ಹಿಂದೂ ಧಾರ್ಮಿಕ ವಿಷಯಗಳಲ್ಲಿ ಅಗಾಧ ಪಾಂಡಿತ್ಯವನ್ನು ಹೊಂದಿರುವ ಸ್ವಾಮೀಜಿಯವರು ಅನೇಕ ಗ್ರಂಥಗಳನ್ನು ರಚಿಸಿದ್ದಾರೆ.

### ಪೀಠಿಕೆ

ಬಹು ಪ್ರಾಚೀನ ಕಾಲದಿಂದಲೂ ಭಾರತವರ್ಷ ಅಥವಾ ಇಂಡಿಯಾ ದೇಶವು ಯುಕ್ತರೀತಿಯ ವಿದ್ಯಾಭ್ಯಾಸದ ಮೂಲಕ ಜ್ಞಾನಸಂಪಾದನೆಗಾಗಿ ಅತಿ ಹೆಚ್ಚಿನ ಒತ್ತುನೀಡಿದೆ. ವಸ್ತುತಃ ಲೋಕವು ವಿದ್ಯೆಯಿಲ್ಲದವರನ್ನು ಪಶುಸಮಾನರೆಂದು ಕಡೆಗಣಿಸಿ, ವಿದ್ಯಾವಂತ ವ್ಯಕ್ತಿಗಳನ್ನು ಎಲ್ಲೆಡೆ ಗೌರವಿಸುತ್ತದೆ.

### ಪ್ರಾಚೀನ ಭಾರತದಲ್ಲಿ ವಿದ್ಯಾಭ್ಯಾಸ

ಪ್ರಾಚೀನ ಭಾರತದಲ್ಲಿ ವಿದ್ಯಾಭ್ಯಾಸವು ವಿದ್ಯಾರ್ಥಿಗಳನ್ನು ಇಹಜೀವನಕ್ಕೆ ಸಿದ್ಧಗೊಳಿಸಿ ಇಹದ ನಂತರದ ಘಟ್ಟಕ್ಕೂ ಅನುಗೊಳಿಸುವುದನ್ನು ಗುರಿಯಾಗಿ ಹೊಂದಿತ್ತು. ಬೃಹತ್ತಾದ ಗುರುಕುಲಗಳನ್ನು ನಡೆಸುತ್ತಿದ್ದ ಋಷಿಗಳು 'ಅನ್ನವಿದ್ಯೆ'ಗೂ 'ಬ್ರಹ್ಮ ವಿದ್ಯೆ'ಗೂ (ಅಧ್ಯಾತ್ಮವಿದ್ಯೆ) ಸಮಾನ ಮಹತ್ತ್ವ ನೀಡುತ್ತಿದ್ದರು. ಸಹಜವಾಗಿ ಗುರುಕುಲದ ವಿದ್ಯಾರ್ಥಿಗಳು ತಮ್ಮ ವೈಯಕ್ತಿಕ ಜೀವನದ ಶ್ರೇಯೋಭಿವೃದ್ಧಿಗೂ, ಸಾಮಾಜಿಕ ಕರ್ತವ್ಯ ನಿರ್ವಹಣೆಗೂ ಸೂಕ್ತ ರೀತಿಯ ತರಬೇತಿ ಪಡೆಯುತ್ತಿದ್ದರು. ಇದನ್ನೇ ಸ್ವಾಮಿ ವಿವೇಕಾನಂದರು **'ಆತ್ಮಮೋಕ್ಷ ಮತ್ತು ಜಗತ್ತಿನ ಹಿತ'** ಎಂದು ಸಂಕ್ಷಿಪ್ತವಾಗಿ ಕರೆದಿದ್ದಾರೆ.

> ನಮ್ಮ ಹುಡುಗರು ನಿಷೇಧಮಯವಾದ ವಿದ್ಯಾಭ್ಯಾಸವನ್ನು ಪಡೆಯುವರು. ಇದು ಪುರುಷಸಿಂಹರನ್ನಾಗಿ ಮಾಡುವ ವಿದ್ಯಾಭ್ಯಾಸವಲ್ಲ. ನಾವು ಕೆಲಸಕ್ಕೆ ಬಾರದವರು ಎಂದು ಮಾತ್ರ ಕಲಿತಿರುವೆವು. ನಮ್ಮ ದೇಶದಲ್ಲಿ ಮಹಾವ್ಯಕ್ತಿಗಳು ಜನ್ಮವೆತ್ತಿದ್ದರು ಎಂಬುದನ್ನು ತಿಳಿಯುವಂತೆ ಮಾಡಿರುವುದು ಅಪರೂಪ. ಇದು ಸಂಪೂರ್ಣ ನಿಷೇಧ ಪ್ರಾಧಾನ್ಯ ವಿದ್ಯಾಭ್ಯಾಸ. ಅದರ ತಳಹದಿಯ ಮೇಲೆ ನಿಂತ ಎಂತಹ ಶಿಕ್ಷಣವಾದರೂ ಮರಣಕ್ಕಿಂತ ಕೇಡು.
>
> –ಸ್ವಾಮಿ ವಿವೇಕಾನಂದ

### ಆಧುನಿಕ ಭಾರತದಲ್ಲಿ ವಿದ್ಯಾಭ್ಯಾಸ

ಈಗ ನಮ್ಮ ದೇಶದಲ್ಲಿ ಪ್ರಚಲಿತವಿರುವ ವಿದ್ಯಾಭ್ಯಾಸ ವ್ಯವಸ್ಥೆಯು, ಕಾಲಪರೀಕ್ಷೆಯಲ್ಲಿ ಯಶಸ್ವಿಯಾಗಿರುವ ನಮ್ಮ ಪ್ರಾಚೀನ ಮೌಲ್ಯಗಳಿಗೆ ವಿರುದ್ಧವಾಗಿದೆ. ಈ ವ್ಯವಸ್ಥೆಯಿಂದ ಹೊರಬಿದ್ದ ಯಾವ ವ್ಯಕ್ತಿಯೂ ಸಮಾಜಸೇವೆಯನ್ನು ಸಲ್ಲಿಸುವುದಿರಲಿ, ತನ್ನ ಕಾಲ ಮೇಲೆ ತಾನು ನಿಂತುಕೊಳ್ಳಲೂ ಅನರ್ಹನಾಗಿರುತ್ತಾನೆ. ನಮಗೆ ರಾಜಕೀಯ ಸ್ವಾತಂತ್ರ್ಯ ದೊರಕಿದ ಮೇಲೆ, ನಮ್ಮನ್ನು ಆಳಿದ್ದ ಜನನಾಯಕರು ಆರ್ಥಿಕ ಸಬಲೀಕರಣಕ್ಕೆ ಹೆಚ್ಚು ಗಮನ ಹರಿಸಿದರು. ಅದರ ಜೊತೆಗೇ ಆಗಬೇಕಿದ್ದ ಉತ್ತಮ ಹಾಗೂ ಯೋಗ್ಯ ರೀತಿಯ ವಿದ್ಯಾಭ್ಯಾಸದ ವ್ಯವಸ್ಥೆಯನ್ನು ರೂಪಿಸಲಿಲ್ಲ; ತನ್ಮೂಲಕ ಜನಸಾಮಾನ್ಯರ ಮೌಲ್ಯವರ್ಧನೆ ಮತ್ತು ಬುದ್ಧಿವರ್ಧನೆಗಾಗಿ ಲಕ್ಷ್ಯ ವಹಿಸಲಿಲ್ಲ; ಜನಸಾಮಾನ್ಯರು, ಆ ಆರ್ಥಿಕ ಬೆಳವಣಿಗೆಯನ್ನು ಸರ್ವಜನರ ಹಿತಕ್ಕಾಗಿ ಬಳಸಿಕೊಳ್ಳಲು ತಕ್ಕ ಪ್ರೋತ್ಸಾಹ ನೀಡಲಿಲ್ಲ. ಇದೇ ಈ ಪರಿಸ್ಥಿತಿಗೆ ಕಾರಣ. ಶಿಕ್ಷಣವು ಎಲ್ಲ ಜನರಿಗೂ ಸಿಗುವಂತಾಗಲು ಯೋಜನೆ ರೂಪಿಸಲು ಸರ್ಕಾರವು ಶ್ರೇಷ್ಠ ಶಿಕ್ಷಣತಜ್ಞರ ನೇತೃತ್ವದಲ್ಲಿ ಸಮಿತಿಗಳನ್ನು ರಚಿಸಿದರೂ, ಅವು ಕೊಟ್ಟ ವರದಿಗಳನ್ನು ಮೂಲೆಗುಂಪಾಗಿಸಿ ಅವನ್ನು ಜಾರಿಗೊಳಿಸಲೇ ಇಲ್ಲ.

### ಶಿಕ್ಷಣವ್ಯವಸ್ಥೆಯಲ್ಲಿ ವಿಜ್ಞಾನದ ಮತ್ತು ಮಾನವಿಕಶಾಸ್ತ್ರದ ಸ್ಥಾನ

ವಿಜ್ಞಾನದ ಶಿಕ್ಷಣವು ನಮ್ಮ ಆರ್ಥಿಕ ಪುರೋಭಿವೃದ್ಧಿಗೆ, ನಮ್ಮ ನಾಗರಿಕತೆಯ ಮಟ್ಟದ ಏರಿಕೆಗೆ ಅಥವಾ ನಾಗರಿಕ ಜೀವನದ ಊರ್ಧ್ವಗಾಮಿತ್ವಕ್ಕೆ ಅತ್ಯಂತ ಅವಶ್ಯಕ. ಆದರೆ ಇತಿಹಾಸ ಮತ್ತು ಪೌರಸಂಬಂಧಿತ ವಿಷಯಗಳನ್ನೊಳಗೊಂಡಂತೆ ಸಾಮಾನ್ಯವಾಗಿ 'ಸಮಾಜಶಾಸ್ತ್ರ' ಎಂದು ಪ್ರಸಿದ್ಧವಾಗಿರುವ ಮಾನವಿಕಶಾಸ್ತ್ರವೂ ಕೂಡ, ವಿಜ್ಞಾನವು ಪರಿಶೋಧಿಸಿ ನೀಡಿರುವ ಹೊಸ ಆವಿಷ್ಕಾರಗಳನ್ನು ಕ್ರೋಡೀಕರಿಸಿ ಅವುಗಳ ಪ್ರಯೋಜನವನ್ನು ಸಮಾಜದ ಒಟ್ಟು ಒಳಿತಿಗಾಗಿ ಹೇಗೆ ಬಳಸಬೇಕೆಂದು ತಿಳಿಸಿ ಕೊಡಲು ಅವಶ್ಯಕವಾಗಿದೆ.

ಇಲ್ಲಿ ಇತಿಹಾಸದ ನಿರ್ಣಾಯಕ ಪಾತ್ರ ಹಿರಿದಾಗುತ್ತದೆ. ಇತಿಹಾಸದ ಗ್ರಂಥಗಳು ಹಿಂದೆ ಆದ ಘಟನೆಗಳನ್ನು ನಿಷ್ಪಕ್ಷಪಾತವಾಗಿ, ನೈಜವಾಗಿ ವಿವರಿಸಬೇಕು. ಅಲ್ಲದೆ ಅವುಗಳನ್ನು ಕೂಲಂಕಷವಾಗಿ ವಿವೇಚಿಸಿ, ಒಂದು ಸಮತೋಲನ ನಿರ್ಧಾರಕ್ಕೆ ಬರಬೇಕು. ಅವು ಮುಂದಿನ ಪೀಳಿಗೆಗೆ ಸರಿಯಾದ ಮಾರ್ಗಸೂಚಿಯಾಗಿರುವಂತಿರಬೇಕು.

### ಸ್ವಾತಂತ್ರ್ಯಪೂರ್ವ ಭಾರತದ ಇತಿಹಾಸ ಗ್ರಂಥಗಳು

ಸ್ವಾತಂತ್ರ್ಯಪೂರ್ವ ಭಾರತದ ಇತಿಹಾಸಗ್ರಂಥಗಳು ವಲಸೆ ಬಂದ ಪಾಶ್ಚಿಮಾತ್ಯ ಆಡಳಿತಗಾರರಿಂದ ಮತ್ತು ಅವರ ಹಿಂಬಾಲಕರಿಂದ ಚತುರತೆಯಿಂದ ತಿರುಚಲ್ಪಟ್ಟಿವೆ ಎಂಬುದು ನಿಸ್ಸಂದೇಹವಾಗಿ ತಿಳಿದಿರುವ ಅಂಶ. ಈ ಕಾರ್ಯದಲ್ಲಿ ಅವರು ತಮ್ಮನ್ನು ಎತ್ತರಕ್ಕೆ ಏರಿಸಿಕೊಂಡು ನಮ್ಮನ್ನು ಕೀಳಾಗಿಸಿರುವುದು ಅವರ ಚತುರತೆಯ ಕುಟಿಲೋಪಾಯ. ಇದಕ್ಕಾಗಿಯೇ ಸ್ವಾಮಿ ವಿವೇಕಾನಂದರು, ಭಾರತೀಯರಿಗೆ, ತಮ್ಮ ಇತಿಹಾಸ ಪುಸ್ತಕಗಳನ್ನು

ತಾವೇ ರಚಿಸಿಕೊಳ್ಳುವಂತೆ ಆಗ್ರಹ ಮಾಡಿದುದು; ಪಾಶ್ಚಿಮಾತ್ಯ ಇತಿಹಾಸಕಾರರಿಂದ ರಚಿತವಾದ ಪುಸ್ತಕಗಳನ್ನು ನಂಬದೆ, ಅವುಗಳಿಂದ ಪ್ರಭಾವಿತರಾಗದೆ, ಘಟನೆಗಳ ನೈಜ ವಸ್ತುನಿಷ್ಠ ಆಧಾರದ ಮೇಲೆ ಗ್ರಂಥಗಳನ್ನು ರಚಿಸಲು ಕರೆ ನೀಡಿದುದು. ದುರದೃಷ್ಟವೆಂದರೆ, ರಾಜಕೀಯ ಸ್ವಾತಂತ್ರ್ಯ ದೊರಕಿದ ನಂತರವೂ, ಈ ದಿಶೆಯಲ್ಲಿ ಯಾವ ಗಂಭೀರ ಪ್ರಯತ್ನಗಳೂ ನಡೆಯದಿರುವುದು. ಹೀಗಾಗಿ ನಮ್ಮ ಯುವಜನಾಂಗವು ಇನ್ನೂ ದಾಸ್ಯ ಮನೋಭಾವದಿಂದ, ಕೀಳರಿಮೆಯಿಂದ ತೊಳಲುತ್ತಿರುವುದು ಮುಂದುವರಿದಿದೆ.

### ನಮ್ಮ ಮುಂದಿರುವ ಕಾರ್ಯ

"ತಡವಾಗಿಯಾದರೂ ಕಾರ್ಯಪ್ರವೃತ್ತರಾಗುವುದು, ಸಂಪೂರ್ಣ ಕಾರ್ಯವಿಮುಖರಾಗಿರುವುದಕ್ಕಿಂತಲೂ ಮೇಲು" ಎಂಬ ನಾಣ್ಣುಡಿಯಂತೆ, ಈಗಲಾದರೂ ಕೇಂದ್ರ ಸರ್ಕಾರವು ನೈಜ ರಾಷ್ಟ್ರಭಾವನೆಯ ಒಂದು ಸಮಿತಿಯನ್ನು ರಚಿಸಬೇಕು. ಇತಿಹಾಸ ಕ್ಷೇತ್ರದಲ್ಲಿರುವ ತಜ್ಞರು, ಪುರಾತನವಸ್ತುಶಾಸ್ತ್ರವೇತ್ತರೂ, ಭಾರತೀಯ ಸಂಸ್ಕೃತಿನಿಷ್ಠರೂ ಅದರ ಸದಸ್ಯರಾಗಿರಬೇಕು. ಈ ಸಮಿತಿಯು ಇತಿಹಾಸ ಪುಸ್ತಕಗಳಲ್ಲಿ ತಿರುಚಲ್ಪಟ್ಟಿರುವ ಅಂಶಗಳನ್ನು ಸರಿಪಡಿಸಿ, ಅಧಿಕೃತ ದಾಖಲೆಗಳನ್ನು ಸಂಶೋಧಿಸಿ, ಘಟನೆಗಳನ್ನು ವಸ್ತುನಿಷ್ಠೆಯಿಂದ ನಿರೂಪಿಸಬೇಕಾದ ಕಾರ್ಯ ಇಂದು ಅವಶ್ಯ.

ಈ ದೃಷ್ಟಿಯಿಂದ ನೋಡಿದರೆ ಎನ್.ಡಿ.ಎ. ಸರ್ಕಾರವು ಈ ದಿಶೆಯಲ್ಲಿ ಮುಂಚೆಯೇ ಒಪ್ಪಲಾಗಿದ್ದ ಸೂತ್ರಗಳ ಆಧಾರದ ಮೇಲೆ ಪೂರ್ವಗ್ರಹವಿಲ್ಲದ ತಜ್ಞರಿಂದ, ಈ ನ್ಯೂನತೆಗಳನ್ನು, ಓರೆಕೋರೆಗಳನ್ನು ಸರಿಪಡಿಸಲು ಪ್ರಾಮಾಣಿಕಪ್ರಯತ್ನ ನಡೆಸಿದ್ದು ಸ್ತುತ್ಯರ್ಹ.

### ಉಪಸಂಹಾರ

ಈಗಲೂ, ಕೆಲವೊಂದು ಮುಖ್ಯ ಸ್ತರಗಳಲ್ಲಿ ಚರಿತ್ರೆಯನ್ನು ಕೊಂಕಿಸಿ, ವಿರೂಪಗೊಳಿಸಿ ಅದನ್ನೇ ಸತ್ಯವೆಂದು ಬಿಂಬಿಸಿ ಯುವ ಜನಾಂಗದ ಮನಸ್ಸಿನ ಮೇಲೆ ಪ್ರಭಾವ ಬೀರಲು ಪ್ರಯತ್ನಗಳು ನಡೆದಿರುವುದು ತೀರ ದುರದೃಷ್ಟಕರ. ದುರುದ್ದೇಶದಿಂದ ನಡೆಯುತ್ತಿರುವ ಈ ಕಾರ್ಯಗಳ ಪರಿಣಾಮ ವಿಪತ್ಕಾರಿಯಾದುದು. ಈ ಕಾರ್ಯದ ಹಿಂದಿರುವ ಬುದ್ಧಿಮತ್ತರು ಅದರ ದುಷ್ಪರಿಣಾಮವನ್ನು ಅರಿತು ಹಿಂದೆ ಸರಿಯುವರೆಂದು ಆಶಿಸೋಣ. ಚೀನಾ ಮುಂತಾದ ಅನ್ಯದೇಶಗಳು, ತಮ್ಮ ಸ್ಥೈರ್ಯವನ್ನು ಎತ್ತಿಹಿಡಿಯುವ, ತಮ್ಮ ದೇಶದ ರಾಷ್ಟ್ರೀಯ ಸಮಗ್ರ ಮನೋಭಾವನೆಗಳನ್ನು ಯಾವುದೇ ರೀತಿಯಲ್ಲಿ ಪಲ್ಲಟಗೊಳಿಸದಿರುವಂತಹ ದಿಶೆಯಲ್ಲಿ ಮಾಡುತ್ತಿರುವ ಕಾರ್ಯಗಳಿಂದ ನಾವೂ ಪಾಠ ಕಲಿಯೋಣ.

(ಇಂಗ್ಲಿಷ್‌ನಿಂದ ಭಾವಾನುವಾದ: ಎನ್. ಪ್ರಭಾಕರ)

★

## ಸ್ನೇಹಪ್ರಭ

**ನಾವು ಕೆಲವರನ್ನು ತೃಪ್ತಿಪಡಿಸಲು ಎಷ್ಟು ಯತ್ನಿಸಿದರೂ ಸಾಧ್ಯವಾಗುವುದಿಲ್ಲ. ಯಾವಾಗಲೂ ಅವರು ಹೊಸ ಹೊಸ ಬೇಡಿಕೆಗಳನ್ನು ಮುಂದಿಡುತ್ತಲೇ ಇರುತ್ತಾರೆ. ಆಗ ಏನು ಮಾಡಬೇಕು?**

ಈ ಪ್ರಪಂಚದಲ್ಲಿ ಯಾರನ್ನೂ ಸಂಪೂರ್ಣವಾಗಿ ತೃಪ್ತಿಪಡಿಸಲಾಗುವುದಿಲ್ಲ. ನಾವು ಭಗವಂತನನ್ನು ತೃಪ್ತಿಪಡಿಸಲು ಪ್ರಯತ್ನಿಸಬೇಕು. ಅವನು ಆಶುತೋಷ. ಸ್ವಲ್ಪ ಪತ್ರೆ, ಹೂವು, ನೀರು ಇವುಗಳನ್ನು ಕೊಟ್ಟರೂ ತೃಪ್ತನಾಗುತ್ತಾನೆ. "ತಸ್ಮಿನ್ ತುಷ್ಟೇ ಜಗತ್ ತುಷ್ಟಂ" –ಅವನು ತೃಪ್ತನಾದರೆ ಇಡೀ ಜಗತ್ತು ತೃಪ್ತವಾಗುತ್ತದೆ. ಮರದ ಎಲೆಗಳಿಗೆ ನೀರು ಸಿಂಪಡಿಸಿದರೆ ಏನು ಪ್ರಯೋಜನ, ಅದೇ ನೀರನ್ನು ಬೇರಿಗೆ ಎರೆದರೆ ಅದು ಇಡೀ ಮರಕ್ಕೆ ತಲುಪುವುದು, ಅಲ್ಲವೇ?

ಆ 'ಕೆಲವರ' ಗುಂಪಿಗೆ ನಾವೂ ಸೇರಿರಬಹುದಲ್ಲವೇ? ಅದು ನಮಗೆ ಗೊತ್ತಾಗುವುದಿಲ್ಲ, ಇತರರಿಗೆ ತಿಳಿದುಬರುತ್ತದೆ. ಇತರರು ನಮ್ಮನ್ನು ತೃಪ್ತಿಪಡಿಸಲು ಎಷ್ಟೊಂದು ಪ್ರಯತ್ನಿಸುತ್ತಿರುವರೋ, ಅದು ನಮ್ಮ ಅರಿವಿಗೆ ಬರುವುದೇ ಇಲ್ಲ. ಕೇವಲ ಭೌತಿಕವಸ್ತುಗಳು ಮಾತ್ರವಲ್ಲದೆ, ಪ್ರೀತಿ, ಸಹಾನುಭೂತಿ, ಪ್ರಶಂಸೆ, ಸ್ಥಾನ–ಮಾನಗಳೂ ನಮ್ಮ ಬೇಡಿಕೆಗಳಾಗಿರಬಹುದು. ಈ ಬೇಡಿಕೆಗಳನ್ನು ಈಡೇರಿಸಲು ಬಹುಜನರು ಪ್ರಯತ್ನಿಸಿ ಸೋತಿರಬಹುದು. ಇತರರನ್ನು ತೃಪ್ತಿಪಡಿಸುವುದಕ್ಕೆ ಮುಂಚೆ ನಮ್ಮನ್ನು ನಾವೇ ತೃಪ್ತಿಪಡಿಸಿಕೊಳ್ಳಬೇಕು.

ಎಲ್ಲರನ್ನೂ ತೃಪ್ತಿಪಡಿಸಬೇಕೆಂಬ ಗೀಳು ಒಂದು ಮಾನಸಿಕ ರೋಗ –ಅದು ಯಾವುದೋ ಆಂತರಿಕ ಕೊರತೆಯನ್ನು ಸೂಚಿಸುತ್ತದೆ. ಆಂತರಿಕ ಸಂತೃಪ್ತಿ ಇರುವಾಗ, ಆತ್ಮತೃಪ್ತನಾಗಿರುವಾಗ ಇತರರಿಂದ ತೃಪ್ತಿಯನ್ನೂ ಬಯಸುವುದಿಲ್ಲ, ಇತರರನ್ನು ತೃಪ್ತಿಪಡಿಸುವ ಗೋಜಿಗೂ ಹೋಗುವುದಿಲ್ಲ. ತನ್ನ ಪಾಡಿಗೆ ತಾನಿರುತ್ತಾನೆ. ಅವಶ್ಯವಿದ್ದರೆ ಇತರರಿಗೆ ಸಹಾಯ ಮಾಡುತ್ತಾನೆ – ಆವಶ್ಯಕತೆಗೆ ಅನುಗುಣವಾಗಿ ವರ್ತಿಸುತ್ತಾನೆ.

ಪ್ರತಿಯೊಬ್ಬರ ಆವಶ್ಯಕತೆಯೂ ಬೇರೆ ಬೇರೆ ಇರುತ್ತದೆ. ಕೆಲವೊಮ್ಮೆ ವ್ಯಕ್ತಿಗೇ ತನ್ನ ಬೇಡಿಕೆ ಏನು ಎಂಬುದು ತಿಳಿಯದೇ ಇರಬಹುದು. ಒಬ್ಬ ವ್ಯಕ್ತಿ ಮಾನ್ಯತೆಗಾಗಿ ಹಾತೊರೆಯುತ್ತಿರಬಹುದು. ಧನಕನಕಾದಿ ಎಷ್ಟೇ ವಸ್ತುಗಳನ್ನು ನೀಡಿದರೂ ಅವನು ತೃಪ್ತನಾಗದೇ ಇರಬಹುದು. ಅವನಿಗೆ ಬೇಕಾಗಿರುವುದು ಗೌರವ, ಮಾನ್ಯತೆ. ಅದನ್ನು ಅವನಿಗೆ ನೀಡಿದರೆ ಅವನಲ್ಲಿ ಆತ್ಮಗೌರವ, ಆತ್ಮವಿಶ್ವಾಸ ಉಂಟಾಗುತ್ತದೆ, ಆಗ ಅವನ ಬೇಡಿಕೆಗಳೂ ಕಡಮೆಯಾಗುತ್ತವೆ.

ಪ್ರೀತಿ ಗೌರವಾದಿಗಳಿಗೆ ಸ್ಪಂದಿಸಲಾಗದ ತುಂಬ ಜಡಸ್ವಭಾವದ ವ್ಯಕ್ತಿಗಳು ಕೂಡ ಅನೇಕರಿರುತ್ತಾರೆ. ಅವರು ಬಯಸುವುದೂ ಜಡವಸ್ತುಗಳನ್ನೇ. ಅವುಗಳ ಮೂಲಕವೇ ಅವರಿಗೆ ನಮ್ಮ ಪ್ರೀತಿಯನ್ನು ತೋರಿಸಬೇಕು. ಅವರಿಂದ ನಾವು ಏನನ್ನೂ ಬಯಸಲಾಗುವುದಿಲ್ಲ – ಕೃತಜ್ಞತೆಯನ್ನೂ ಕೂಡ. ನೀಡುವುದರಲ್ಲೇ ನಾವು ಸಂತೃಪ್ತಿಯನ್ನು ಹೊಂದಬೇಕು. ನಮಗೆ ಎಷ್ಟು ಸಾಧ್ಯವೋ ಅಷ್ಟು ನೀಡುವುದು, ಏನು ಸಾಧ್ಯವೋ ಅದನ್ನು ನೀಡುವುದು, ಆದರೆ ಏನನ್ನೂ ಪ್ರತಿಯಾಗಿ ಅಪೇಕ್ಷಿಸಬಾರದು. ನಾವು ಅಪೇಕ್ಷಿಸಿದರೆ ನಮ್ಮ ಅಂತರಂಗದ ಕೊರತೆಯನ್ನು ಅದು ಸೂಚಿಸುತ್ತದೆ. ಕೊರತೆ ಬೇಡಿಕೆಯಾಗುತ್ತದೆ. ಆಗ ನೀಡುವವರು, ಪಡೆಯುವವರು ಇಬ್ಬರೂ ಬೇಡುವವರಾಗುತ್ತಾರೆ. ಈ ಪ್ರಪಂಚದಲ್ಲಿ ಹೆಚ್ಚಿನ ಜನರು ಒಂದಲ್ಲ ಒಂದು ರೀತಿಯಲ್ಲಿ ಇಂಥ ಭಿಕ್ಷುಕರೇ. ಅಂಥವರು ನಾವು ಆಗದೇ ಇರೋಣ.

(ಬರಹ : ಸ್ವಾಮಿ ನಿತ್ಯಸ್ಥಾನಂದ)

# ವೇದಾಂತ ಮತ್ತು ರಾಮಕೃಷ್ಣ ವಿವೇಕಾನಂದ ದರ್ಶನ

ಸ್ವಾಮಿ ನಿತ್ಯಸ್ಥಾನಂದ

*(ಹಿಂದಿನ ಸಂಚಿಕೆಯಿಂದ)*



ಶ್ರೀರಾಮಕೃಷ್ಣರು ಅಪಕ್ವ ಮತ್ತು ಪಕ್ವ ಎಂಬ ಎರಡು ಬಗೆಯ ಅಹಂಕಾರಗಳ ಬಗ್ಗೆ ಹೇಳುತ್ತಾರೆ. "ನಾನು ಹಣವಂತ", "ನಾನು ಮಹಾಜ್ಞಾನಿ", "ನನ್ನ ಸಮಾನ ಯಾರೂ ಇಲ್ಲ" ಎಂದು ಹೆಮ್ಮೆಪಟ್ಟುಕೊಳ್ಳುವುದು ಅಪಕ್ವ ಅಹಂಕಾರ. "ನಾನು ಭಗವಂತನ ದಾಸ", "ನಾನು ಭಗವಂತನ ಮಗು" ಎಂದೆಲ್ಲ ಭಾವಿಸುವುದು ಪಕ್ವ ಅಹಂಕಾರ. ಇಲ್ಲಿ ಶ್ರೀರಾಮಕೃಷ್ಣರು ಸೂಚಿಸುವುದೇನೆಂದರೆ ದೇವರೊಡನೆ ಸಂಬಂಧವನ್ನು ಪಡೆದ ಅಹಂಕಾರವು ಪಕ್ವವಾದುದು ಎಂದು. ಅಂದರೆ ಪೂರ್ಣದೊಂದಿಗೆ ಸಂಬಂಧಿಸಿದ ಅಹಂಕಾರವು ಪಕ್ವವಾಗುತ್ತದೆ. ಅದು ಪ್ರಾಪಂಚಿಕ ವಿಷಯಗಳೊಡನೆ ಸಂಬಂಧಿಸಿದ್ದರೆ ಅಪಕ್ವವಾಗಿರುತ್ತದೆ. ಮರದಿಂದ ಬೇರೆಯಾದ ಕೊಂಬೆಯು ಕ್ರಮೇಣ ಒಣಗಿಹೋಗುವಂತೆ ಪೂರ್ಣದಿಂದ ಪ್ರತ್ಯೇಕವಾದ ಅಹಂಕಾರವೂ ರೋಗಗ್ರಸ್ತವಾಗುತ್ತದೆ. ನಮ್ಮ ಅಹಂಕಾರವನ್ನು ಯಾವುದಾದರೂ ಒಂದು ಭಾವದ ಮೂಲಕ ಭಗವಂತನೊಂದಿಗೆ ಸಂಬಂಧಿಸಿ, ಅದರ ಮೂಲವಾದ ಭಗವತ್ತತ್ತ್ವವನ್ನು ಅರಿಯುವುದೇ ಆಧ್ಯಾತ್ಮಿಕ ಸಾಧನೆ.

ವೇದಾಂತದ ಮುಖ್ಯ ಪರಿಕಲ್ಪನೆಯಾದ ಆಂತರಿಕ ದಿವ್ಯತೆಗೆ ಸ್ವಾಮಿ ವಿವೇಕಾನಂದರು ಹೆಚ್ಚು ಒತ್ತನ್ನು ನೀಡಿದರು, ಜಗನ್ಮಿಥ್ಯಾತ್ವಕ್ಕಲ್ಲ. ಅವರು ಚಿಕಾಗೊ ಧರ್ಮಸಮ್ಮೇಳನದಲ್ಲಿ ವೇದಾಂತ ಸಿಂಹಗರ್ಜನೆಯನ್ನು ಹೀಗೆ ಮಾಡುತ್ತಾರೆ : " 'ಅಮೃತಪುತ್ರರೇ!' ಎಷ್ಟು ಮಧುರವಾದ ಭರವಸೆ ನೀಡುವ ಹೆಸರು! ಸಹೋದರರೇ, 'ಅಮೃತಪುತ್ರರು' ಎಂಬ ಮಧುರನಾಮದಿಂದ ನಿಮ್ಮನ್ನು ಸಂಬೋಧಿಸುವುದಕ್ಕೆ ಅನುಮತಿಯನ್ನು ಕೊಡಿ. ನೋಡಿ, ಹಿಂದೂಗಳು ನಿಮ್ಮನ್ನು ಪಾಪಿ ಎಂದು ಖಂಡಿತ ಕರೆಯುವುದಿಲ್ಲ. ನಾವು ಭಗವಂತನ ಮಕ್ಕಳು. ಅಮೃತಾನಂದದಲ್ಲಿ ಭಾಗಿಗಳು. ನೀವೆಲ್ಲರೂ ಜಗದ ಪವಿತ್ರಾತ್ಮರು. ಪಾಪಿಗಳು ಎಂದು ಮಾನವನನ್ನು ಕರೆಯುವುದೇ ಘೋರಪಾತಕ, ಮಾನವ ಸ್ವಭಾವಕ್ಕೆ ಬಗೆಯುವ ಮಹಾದ್ರೋಹ. ಸಿಂಹಗಳೇ ಬನ್ನಿ. ನೀವು ಕುರಿಗಳು ಎಂಬ ಭ್ರಾಂತಿಯನ್ನು ಕೊಡಹಿ. ಅಮೃತಾತ್ಮರು ನೀವು, ಮುಕ್ತಾತ್ಮರು ನೀವು" (ಕೃತಿಶ್ರೇಣಿ, ೧.೧೩). ಹೀಗೆ ನಮ್ಮೊಳಗಿರುವ ದೈವತ್ವವನ್ನು ಹೊರಗೆ ವ್ಯಕ್ತಪಡಿಸುವುದೇ ಧರ್ಮ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ.

ಪ್ರತಿಯೊಬ್ಬರಲ್ಲಿಯೂ ದೈವಾಂಶ ಇರುವುದರಿಂದ 'ಸೇವೆಯೇ ದೇವಸೇವೆ' ಎಂಬ ಹೊಸ ಸೇವಾತತ್ತ್ವವನ್ನು ವಿವೇಕಾನಂದರು ಪ್ರತಿಪಾದಿಸಿದರು. "ಶಿವಜ್ಞಾನೇ ಜೀವಸೇವಾ" ಎಂಬ ಭಾವನೆಯನ್ನು ವಿವೇಕಾನಂದರು ಶ್ರೀರಾಮಕೃಷ್ಣರಿಂದಲೇ ಪಡೆದರು. ಶ್ರೀರಾಮಕೃಷ್ಣರು ಒಂದು ದಿನ ವೈಷ್ಣವತತ್ತ್ವವನ್ನು ವಿವರಿಸುತ್ತಿರುವಾಗ, ವೈಷ್ಣವರ ಮೂರು ಮುಖ್ಯ ಭಾವನೆಗಳಾದ 'ವಿಷ್ಣುಭಕ್ತಿ', 'ವೈಷ್ಣವಸೇವಾ' ಮತ್ತು 'ಜೀವದಯೆ' – ಇವುಗಳ ಬಗ್ಗೆ ಪ್ರಸ್ತಾಪಿಸುತ್ತಾ ಭಾವಸಮಾಧಿಗೆ ಹೋದರು. ಸ್ವಲ್ಪ ಸಮಯದ ನಂತರ ಸಾಮಾನ್ಯಸ್ಥಿತಿಗೆ ಬಂದ ಮೇಲೆ, "ಜೀವಿಗಳ ಮೇಲೆ ದಯೆ ತೋರಿಸಲು ನಾವಾರು? ದಯೆಯಲ್ಲ, ಸೇವೆ" ಎಂದು ಅವರು ಉನ್ನತಭಾವದಲ್ಲಿ ಉದ್ಗರಿಸಿದರು. ಅಲ್ಲಿಯೇ ಇದ್ದು ಇದನ್ನು ಕೇಳಿದ ವಿವೇಕಾನಂದರು (ಆಗ ನರೇಂದ್ರ), "ಈ ಭಾವನೆಯೇ ನನ್ನ ಮುಂದಿನ ಸೇವಾಕಾರ್ಯಗಳಿಗೆ ಭದ್ರಬುನಾದಿಯಾಯಿತು" ಎನ್ನುತ್ತಾರೆ. ಅವರು ಹೀಗೆ ಹೇಳುತ್ತಾರೆ: "ಮಾನವಕೋಟಿಗೆ ಸೇವೆ ಮಾಡುವುದೇ ಒಂದು ಮಹಾಭಾಗ್ಯ, ಏಕೆಂದರೆ ಇದೇ ದೇವರ ಪೂಜೆ. ದೇವರು ಎಲ್ಲರಲ್ಲಿಯೂ ಇರುವನು. ಅವನೇ ಮಾನವನ ಆತ್ಮನಾಗಿರುವನು" (ಕೃತಿಶ್ರೇಣಿ, ೬–೩೪೧).

ಶ್ರೀಮದ್ಭಾಗವತದಲ್ಲಿಯೂ ಇಂತಹ ಭಾವನೆಗಳಿವೆ. ಕಪಿಲ ಮಹರ್ಷಿಯು ತನ್ನ ತಾಯಿಯಾದ ದೇವಹೂತಿಗೆ ಉಪದೇಶ ಮಾಡುವಾಗ ತನ್ನನ್ನು ದೇವರೊಡನೆ ಒಂದಾಗಿಸಿಕೊಂಡು (ಭಗವದ್ಗೀತೆಯಲ್ಲಿರುವಂತೆ) ಈ ಮಾತನ್ನು ಹೇಳುತ್ತಾನೆ: